# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-7395/2014/ಡಿ.ಆರ್.ಇ-2 ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 12/12/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ಟಿ.ಜೆ.ತಾಕತ ರಾವ್, ಜಿಲ್ಲಾ ಪ್ರಾಜೆಕ್ಟ್ ಡೈರೆಕ್ಟರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಗಳೂರು, ಹಾಲಿ ನಿವೃತ್ತಿ, (2) ಶ್ರೀ ಶ್ರೀಧರ.ಜಿ, ಯೋಜನಾ ನಿರ್ದೇಶಕರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಹಾಲಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, (3) ಶ್ರೀ ತೇಜಮೂರ್ತಿ, ಸಹಾಯಕ ಯೋಜನಾ ನಿರ್ದೇಶಕರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಹಾಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಯವರ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಮತ್ತು, (4) ಶ್ರೀ ಡೊಮಿನಿಕ್ ಡಿಮಲ್ಲೊ, ಕಿರಿಯ ಅಭಿಯಂತರರು, ಪುರಸಭೆ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ ಎ.ಗೋವಿಂದ ಪ್ರಭು ಬಿನ್ ಲೇಟ್ ವಿಶ್ವನಾಥ್ ಪ್ರಭು, ಮುಖ್ಯ ರಸ್ತೆ, ಬಂಟ್ವಾಳ-574211 (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಟಿ.ಜೆ.ತಾಕತ ರಾವ್, ಜಿಲ್ಲಾ ಪ್ರಾಜೆಕ್ಟ್ ಡೈರೆಕ್ಟರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಗಳೂರು, ಹಾಲಿ ನಿವೃತ್ತಿ, (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ತನಿಖೆಯಲ್ಲಿ, (2) ಶ್ರೀ ಶ್ರೀಧರ.ಜಿ, ಯೋಜನಾ ನಿರ್ದೇಶಕರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಹಾಲಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, (3) ಶ್ರೀ ತೇಜಮೂರ್ತಿ, ಸಹಾಯಕ ಯೋಜನಾ ನಿರ್ದೇಶಕರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಹಾಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಯವರ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಮತ್ತು, (4) ಶ್ರೀ ಡೊಮಿನಿಕ್ ಡಿಮಲ್ಲೊ, ಕಿರಿಯ ಅಭಿಯಂತರರು, ಪುರಸಭೆ,

ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ '2 ರಿಂದ 4ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ದೂರುದಾರರು ತಮ್ಮ ದೂರಿನಲ್ಲಿ ಬಂಟ್ವಾಳ ಪುರಸಭೆಯ ಬಿ.ಮೂಡ ಗ್ರಾಮದ ಬಿ.ಸಿ. ರೋಡ್ ಎಂಬಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಯೋಜನೆ 2ನೇ ಹಂತರಡಿ ಊ.75 ಲಕ್ಷ ವೆಚ್ಚದಲ್ಲಿ ಸಿಮೆಂಟ್ ರಸ್ತೆಯನ್ನು ಮಾಡಲು ಕಾಮಗಾರಿ ಮಂಜೂರಾಗಿತ್ತು. ಸದರಿ ಕಾಮಗಾರಿಗಳಿಗೆ ದಕ್ಷಿಣ ಕನ್ನಡ ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕರು ಟೆಂಡರ್ ಮೂಲಕ ಕೆ.ಬಿ.ಆರ್. ಇನ್ಫ್ರಾಟೆಕ್ ಲಿ., ಬೆಂಗಳೂರು ಎಂಬ ಸಂಸ್ಥೆಗೆ ಗುತ್ತಿಗೆಯನ್ನು ವಹಿಸಿದ್ದು, ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ. ಆದರೆ ಸದರಿ ರಸ್ತೆ ಕಾಮಗಾರಿಯನ್ನು ಮೂಲ ಅಂದಾಜು ಪಟ್ಟಿಯಂತೆ ನಿರ್ವಹಿಸಿರುವುದಿಲ್ಲ. ಕಾರಣ 75 ಲಕ್ಷ ರೂಪಾಯಿಗಳ ಕಾಮಗಾರಿಯು ನಡೆದಿರುವುದು ಸಂಶಯಕ್ಕೆ ಮಾಡಿದೆಯೆಂದು ಆಪಾದಿಸಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

3. ಎದುರುದಾರರು ದಿನಾಂಕ: 15/12/2014 ರಂದು ತಮ್ಮ ಆಕ್ಷೇಪಣೆ ಸಲ್ಲಿಸಿ, ಆಕ್ಷೇಪಣೆಯಲ್ಲಿ ಯೋಜನೆಯ ಮಾರ್ಗಸೂಚಿಗಳಂತೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿಯನ್ನು ಕೆ.ಬಿ.ಆರ್. ಇನ್ಫ್ರಾಟೆಕ್ ಲಿ., ಬೆಂಗಳೂರು ಎಂಬ ಸಂಸ್ಥೆಗೆ ಗುತ್ತಿಗೆಯನ್ನು ವಹಿಸಿಕೊಡಲಾಗಿದ್ದು, ಸದರಿ ಗುತ್ತಿಗೆದಾರರು ಅಂದಾಜು ಪಟ್ಟಿಯಲ್ಲಿ ನಿರ್ದೇಶಿಸಿದಂತೆ ಕಾಮಗಾರಿಯನ್ನು ನಿರ್ವಹಿಸಿರುತ್ತಾರೆಂದು ತಿಳಿಸಿರುತ್ತಾರೆ. ಎದುರುದಾರರು ಮುಂದುವರೆದು ಟೆಂಡರ್ ಕರಾರಿನಂತೆ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಪೂರ್ವದಲ್ಲಿ ನ್ಯೂನ್ಯತೆ ಸರಿಪಡಿಸುವ ಅವಧಿಯನ್ನು ದಿನಾಂಕ: 19/06/2016 ರವರೆಗೆ ನಿಗಧಿಪಡಿಸಿ, ಗುತ್ತಿಗೆದಾರರಿಂದ ಭದ್ರತಾ ಠೇವಣಿಯನ್ನು ಪಾವತಿಸಿಕೊಳ್ಳಲಾಗಿರುತ್ತದೆ. ಕಾಮಗಾರಿಯ ಗುಣಮಟ್ಟದಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಗುತ್ತಿಗೆದಾರರು ಸರಿಪಡಿಸಿಕೊಡಬೇಕಾಗುತ್ತದೆ. ದೂರುದಾರರ ದೂರಿನ ಮೇರೆಗೆ ಗುತ್ತಿಗೆದಾರರಿಗೆ ಲೋಪಗಳನ್ನು ಸರಿಪಡಿಸಲು ನೋಟೀಸ್ ನೀಡಲಾಗಿದೆಯೆಂದು ತಿಳಿಸಿರುತ್ತಾರೆ.

4. ಸದರಿ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರ ಸಲ್ಲಿಸಿ, ಎದುರುದಾರರು ಆಪಾದಿತ ರಸ್ತೆಯನ್ನು ಗುಣಮಟ್ಟವಾಗಿ ಮಾಡಿಸಿರುವುದಿಲ್ಲ ಹಾಗೂ ಅಂದಾಜು ಪಟ್ಟಿಯಲ್ಲಿ ತಿಳಿಸಿದಂತೆ ರಸ್ತೆ ಕಾಮಗಾರಿ ಆಗಿರುವುದಿಲ್ಲವೆಂದು ಪುನರುಚ್ಚರಿಸಿರುತ್ತಾರೆ.

5. ನಂತರ ಪ್ರಸ್ತುತ ಪ್ರಕರಣದಲ್ಲಿ ತನಿಖೆ ಮಾಡಿ ವರದಿ ಸಲ್ಲಿಸಲು ತಾಂತ್ರಿಕ ವಿಭಾಗಕ್ಕೆ ಕಳುಹಿಸಲಾಯಿತು. ಎ.ಇ.–2 ರವರು ತಮ್ಮ ತನಿಖಾ ವರದಿಯನ್ನು ದಿನಾಂಕ: 30/08/2017 ರಂದು ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ಆಪಾದಿತ ಕಾಮಗಾರಿಯ ಸ್ಥಳಕ್ಕೆ ಬೇಟಿ ನೀಡುವ ಪೂರ್ವದಲ್ಲಿ ದೂರುದಾರರಿಗೆ, ಮಂಗಳೂರು ಜಿಲ್ಲಾ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಅಭಿಯಂತರರಾದ ಶ್ರೀ ಶ್ರೀಧರ್, ಸಹಾಯಕ ಕಾರ್ಯಪಾಕ ಅಭಿಯಂತರರಾದ ಶ್ರೀ ತೇಜಮೂರ್ತಿ ಮತ್ತು ಕಿರಿಯ ಅಭಿಯಂತರರಾದ ಶ್ರೀ ಡೊಮೆನಿಕ್ ಡಿ. ಮೆಲ್ಲೋ ಅವರಿಗೆ ನೋಟಿಸ್ ನೀಡಿ ದಿನಾಂಕ: 06/07/2017 ರಂದು ಸ್ಥಳ ಪರಿಶೀಲನೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

6. ತನಿಖಾಧಿಕಾರಿಗಳು ತಮ್ಮ ವರದಿಯ ಖಂಡಿಕೆ 61ರಲ್ಲಿ ಆಪಾದಿತ ರಸ್ತೆಯ ಕಾಂಕ್ರೀಟ್ ಪದರದ ಬದಿಗಳನ್ನು ಅಲ್ಲಲ್ಲಿ ಪರಿಶೀಲಿಸಿದಾಗ, ಅಂದಾಜು ಪಟ್ಟಿಯಂತೆ ಎಲ್ಲಾ ಅಂಶಗಳನ್ನು ನಿರ್ವಹಿಸಿರುವುದಾಗಿ ಕಂಡುಬರುತ್ತದೆಂದು ತಿಳಿಸಿರುತ್ತಾರೆ. ರಸ್ತೆಯ ಉದ್ದ ಮತ್ತು ಅಗಲ ಅಂದಾಜು ಪಟ್ಟಿಯಂತೆ ಅಳತೆ ಪುಸ್ತಕದ ನಮೂದುಗಳಿಗೆ ತಾಳೆಯಾಗಿರುತ್ತದೆ. ಆದರೆ ಸದರಿ ಸಿಮೆಂಟ್ ರಸ್ತೆಯ ಕಾಂಕ್ರೀಟಿನ ಮೇಲ್ಪದರದ ಕೆಲವೆಡೆ ಸವಕಳಿಯಾಗಿರುತ್ತದೆಂದು ತಿಳಿಸಿರುತ್ತಾರೆ.

7. ತನಿಖಾಧಿಕಾರಿಗಳು ತಮ್ಮ ವರದಿಯ ಖಂಡಿಕೆ 62ರಲ್ಲಿ ಕಾಮಗಾರಿಯ ಕಾಂಕ್ರೀಟಿನ ಮಾದರಿಗಳನ್ನು ಸಂಗ್ರಹಿಸಿ ಕೋರ್ ಕ್ರಷಿಂಗ್ ಸ್ಟ್ರೆಂತ್ ಪರೀಕ್ಷೆ ನಡೆಸುವಂತೆ ಗುಣಭರವಸೆ ಉಪ ವಿಭಾಗದ ಅಧಿಕಾರಿಗಳನ್ನು ಕೋರಿದ್ದರು. ಅದರಂತೆ ಮಂಗಳೂರಿನ ಲೋಕೋಪಯೋಗಿ ಇಲಾಖೆಯ ಗುಣಭರವಸೆ ಉಪ ವಿಭಾಗದ ಅಧಿಕಾರಿಗಳು ದಿನಾಂಕ: 12/07/2017 ರಂದು ಸಿಮೆಂಟ್ ರಸ್ತೆಯನ್ನು ಎದುರುದಾರರ ಸಮಕ್ಷಮದಲ್ಲಿ ಪರಿಶೀಲಿಸಿ ಕೋರ್ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿರುತ್ತಾರೆ.

8. ದಿನಾಂಕ: 18/07/2017 ರಂದು ಗುಣಭರವಸೆ ಉಪ ವಿಭಾಗದ ಅಧಿಕಾರಿಗಳು ತಮ್ಮ ವರದಿಯಲ್ಲಿ ಕಾಂಕ್ರೀಟ್ ಪದರವು ನಿಗದಿತ ಸಾಮರ್ಥ್ಯವನ್ನು ಹೊಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಸಿಮೆಂಟ್ ರಸ್ತೆಯನ್ನು ಕಳಪೆಯಾಗಿ ನಿರ್ವಹಿಸಿರುವುದು ಕಂಡುಬರುತ್ತದೆಂದು ತಿಳಿಸಿರುತ್ತಾರೆ.

9. ತನಿಖಾಧಿಕಾರಿಗಳು ತಮ್ಮ ವದಿಯ ಜೊತೆಗೆ ಕಾಮಗಾರಿಯ ಅಂದಾಜು ಪಟ್ಟಿಯನ್ನು, ಅಳತೆ ಪುಸ್ತಕದ ನಕಲನ್ನು ಕಾಮಗಾರಿ ಪೂರ್ಣಗೊಂಡ ದೃಢೀಕರಣ ಪತ್ರ ಹಾಗೂ ಗುತ್ತಿಗೆದಾರರಿಗೆ ನೀಡಿದ ಕಾರ್ಯಾದೇಶದ ಪ್ರತಿ, ಗುತ್ತಿಗೆದಾರರು ಬರೆದುಕೊಟ್ಟ ಕರಾರು ಪತ್ರದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ. ತನಿಖಾಧಿಕಾರಿಗಳು ತಮ್ಮ ವರದಿಯ 72ನೇ ಖಂಡಿಕೆಯಲ್ಲಿ ಆಪಾದಿತ ಸಿ.ಸಿ. ರಸ್ತೆಯು ಕಳಪೆ ಮಟ್ಟದ್ದಾಗಿರುತ್ತದೆ. ಇದಕ್ಕೆ ಮಂಗಳೂರು ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳಾದ ಶ್ರೀ ಶ್ರೀಧರ್, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ತೇಜಮೂರ್ತಿ ಮತ್ತು ಕಿರಿಯ ಅಭಿಯಂತರರಾದ ಶ್ರೀ ಡೊಮೆನಿಕ್ ಡಿ. ಮೆಲ್ಲೋ ಅವರು ಸದರಿ ಕಾಮಗಾರಿಗಳನ್ನು ನಿರ್ವಹಿಸಿದ್ದು, ಕಳಪೆ ಕಾಮಗಾರಿಗೆ ಸದರಿ ಅಧಿಕಾರಿಗಳು ಕಾರಣರಾಗಿರುತ್ತಾರೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ವರದಿಯ ಜೊತೆಗೆ ಕಾಮಗಾರಿಯ ಅಂದಾಜು ಪಟ್ಟಿಯನ್ನು, ಅಳತೆ ಪುಸ್ತಕದ ನಕಲನ್ನು, ಕಾಮಗಾರಿ ಪೂರ್ಣಗೊಂಡ ದೃಢೀಕರಣ ಪತ್ರ ಹಾಗೂ ಗುತ್ತಿಗೆದಾರರಿಗೆ ನೀಡಿದ ಕಾರ್ಯಾದೇಶದ ಪ್ರತಿ, ಗುತ್ತಿಗೆದಾರರು ಬರೆದುಕೊಟ್ಟ ಕರಾರು ಪತ್ರದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲವಾದ್ದರಿಂದ, ಮೇಲ್ನೋಟಕ್ಕೆ ಸದರಿ ಕಾಮಗಾರಿಯಲ್ಲಿ ಅವ್ಯವಹಾರವಾಗಿರುವುದು ಕಂಡುಬರುತ್ತದೆ.

10. ಕಡತದಲ್ಲಿ ಗುಣಭರವಸೆ ಇಲಾಖೆಯ ಅಧಿಕಾರಿಗಳು ದಿನಾಂಕ: 18/07/2017 ರಂದು ನೀಡಿದ ವರದಿಯ ಪ್ರತಿಯನ್ನು ಪರಿಶೀಲಿಸಿದ್ದು, ಸದರಿ ವರದಿಯಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ಪಟ್ಟಿರುತ್ತಾರೆ.

IRC-15-2011 compressive strength of corc is 300 KG/cm2 and the average crushing strength of core is 204.00/cm2. In the present compressive strength is shown as 114.36, 108.34, 114.36 and 120.38. Thus the core strength is not as per the IRC 15-2011 condition. The AEE, PWD, Quality Control Sub-

Division, Mangalore has clearly opined that he compressive strength of concrete core is not satisfied.

11. ಆದ್ದರಿಂದ, ಸದರಿ ಕಾಮಗಾರಿಯ ಗುಣಮಟ್ಟ ಕಳಪೆ ಮಟ್ಟದ್ದಾಗಿದೆಯೆಂದು ಕಂಡುಬರುತ್ತದೆ. ಮತ್ತು ಎದುರುದಾರರು ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲವೆಂದು ಕಂಡುಬರುತ್ತದೆ ಎಂದು ತನಿಖಾಧಿಕಾರಿಯು ಉಲ್ಲೇಖಿಸಿರುವ ವರದಿಯನ್ನು ಒಪ್ಪಿಕೊಂಡು ತನಿಖಾದಿಕಾರಿಯವರು ತಮ್ಮ ವರದಿಯಲ್ಲಿ ತಿಳಿಸಿದ 3 ಅಧಿಕಾರಿಗಳಾದ ಶ್ರೀ ಶ್ರೀಧರ್, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ ತೇಜಮೂರ್ತಿ ಮತ್ತು ಕಿರಿಯ ಅಭಿಯಂತರರಾದ ಶ್ರೀ ಡೊಮೆನಿಕ್ ಡಿ. ಮೆಲ್ಲೋ ಇವರನ್ನು 2 ರಿಂದ 4ನೇ ಎದುರುದಾರರನ್ನಾಗಿ ಸೇರಿಸಲಾಗಿದೆ ಮತ್ತು ಸದರಿಯವರಿಗೆ ಆಕ್ಷೇಪಣೆಗಳನ್ನು ಕೋರಲಾಗಿತ್ತು.

12. 2 ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ತನಿಖಾಧಿಕಾರಿಯವರ ವರದಿಯನ್ನು ಉಲ್ಲೇಖಿಸಿ ಅದಕ್ಕೆ ಖಂಡಿಕೆವಾರು ಉತ್ತರಗಳನ್ನು ನೀಡಿದ್ದಾರೆ. ಸದರಿ ಉತ್ತರದಿಂದ ಕಂಡುಬರುವುದೇನೆಂದರೆ, ತನಿಖಾಧಿಕಾರಿಯು ತನಿಖೆಯಲ್ಲಿ ಉಲ್ಲೇಖಿಸಿದಂತೆ ಕಳಪೆ ಕಾಮಗಾರಿ ಆಗಿದೆ ಎಂಬ ಅಂಶವನ್ನು ನಿರಾಕರಿಸಿರುವುದಿಲ್ಲ, ಬದಲಾಗಿ ಆ ರೀತಿ ಕಳಪೆ ಕಾಮಗಾರಿಯಾಗಿದ್ದರೆ, ನಿಗಧಿತ ಅವಧಿಯಲ್ಲಿ ದುರಸ್ಥಿಗೊಳಿಸುವಂತೆ ಗುತ್ತಿಗೆದಾರರೊಂದಿಗೆ ಒಪ್ಪಂದ ಆಗಿರುತ್ತದೆ ಮತ್ತು ಸದರಿ ಗುತ್ತಿಗೆದಾರರಿಗೆ ಯೋಜನೆಯ ಅಂತಿಮ ಬಿಲ್ಲನ್ನು ಪಾವತಿಸಿಲ್ಲವೆಂದು ಹಾಗೂ M30cc ಗೆ ನೀಡಲಾದ ಮೊತ್ತದಿಂದ M20cc ಟೆಂಡರ್ ದರಗಳಂತೆ ಕಡಿಮೆ ಮಾಡಿದಾಗ ವ್ಯತ್ಯಾಸದ ಮೊತ್ತ ರೂ.80,000/- ಆಗಿದ್ದು, ಆ ಹಣವನ್ನು ಇದೇ ಗುತ್ತಿಗೆದಾರರ ಏಜೆನ್ಸಿಯಿಂದ ಮತ್ತು ನಗರಸಭಾ ವ್ಯಾಪ್ತಿಯಲ್ಲಿ ನಿರ್ವಹಿಸಿದ ಕಾಮಗಾರಿಯಲ್ಲಿ ಕಟಾಯಿಸಿದೆ ಎಂದು ಉಲ್ಲೇಖಿಸಿದ್ದಾರೆ. ಅದು ಅಲ್ಲದೇ, ಗುತ್ತಿಗೆದಾರರು ಒಪ್ಪಂದದಂತೆ ಸಿಸಿ ರಸ್ತೆ ಮಾಡಿದ ನಂತರ ಅದು ಗಟ್ಟಿಗೊಳ್ಳುವಷ್ಟು ಅವಧಿಯವರೆಗೆ ಸಂಚಾರ ನಿಯಂತ್ರಸಲು ಕ್ರಮ ಜರುಗಿಸದೇ ಇರುವುದು ಹಾಗೂ ಕಾಂಕ್ರೀಟ್‌ನ್ನು ಸಮರ್ಪಕವಾಗಿ ಕ್ಯೂರಿಂಗ್ ಮಾಡದೇ ಇರುವುದು ಇತ್ಯಾದಿ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದು ಕಂಡುಬಂದಿದೆ ಎನ್ನುವ ತನಿಖಾಧಿಕಾರಿಯ ವರದಿಗೆ ಸದರಿ ಎದುರುದಾರರು ಗುತ್ತಿಗೆದಾರರೇ ಪಿಎನ್‌ಸಿ ರವರ ನಿರ್ದೇಶನದಂತೆ ಉತ್ತಮ ಗುಣಮಟ್ಟವನ್ನು ಕೈಗೊಂಡಿರುವುದರಿಂದ ತಾವು ಆಡಳಿತಾತ್ಮಕವಾಗಿ ವಿಫಲರಾಗಿರುವುದಿಲ್ಲ, ತಮ್ಮನ್ನು ಈ ಪ್ರಕರಣದಿಂದ ಕೈಬಿಡಬೇಕೆಂದು

ಕೋರಿದ್ದಾರೆ. ಆದರೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ತನಿಖಾಧಿಕಾರಿ ಸ್ಥಳ ತನಿಖೆ ಮಾಡಿ ದೂರುದಾರ ಹಾಗೂ ಎದುರುದಾರರು ಹಾಗೂ ಇತರರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಉಲ್ಲೇಖಿಸಿರುವ ಅಂಶಗಳನ್ನು ಮತ್ತು ಎದುರುದಾರರೇ ಹಾಜರುಪಡಿಸಿರುವ ಛಾಯಾಚಿತ್ರಗಳನ್ನು ಪರಿಶೀಲಿಸಿದಾಗ, ಸಿಸಿ ರಸ್ತೆಯ ಕಾಮಗಾರಿ ಕಳಪೆ ಆಗಿದ್ದರಿಂದಲೇ ಹಾಗೂ 1 ರಿಂದ 4ನೇ ಎದುರುದಾರರು ಸೂಕ್ತವಾದ ಆಡಳಿತಾತ್ಮಕ ಕ್ರಮವನ್ನು ಜರುಗಿಸದೇ ಇರುವುದರಿಂದ, ಸಿಸಿ ರಸ್ತೆಯ ಮೇಲ್ಪದರವು ಕಿತ್ತು ಹೋಗಿದ್ದು, ಪುನ: ಅದನ್ನು ರಿಪೇರಿ ಮಾಡಲು ಮುಂದಾಗಿರುವುದು ಕಂಡುಬರುತ್ತದೆ.

13. ಎದುರುದಾರರು ತಮ್ಮ ಕಾನೂನು ಬದ್ಧ ಜವಾಬ್ದಾರಿಯನ್ನು ಅರಿತು ದೂರುದಾರರು ಆಪಾದಿಸಿರುವ ಸಿಸಿ ರಸ್ತೆಯ ಕಾಮಗಾರಿಯ ಸ್ಥಳದಲ್ಲಿ ಹಾಜರಿದ್ದು, ಸಮಯೋಚಿತವಾಗಿ ಸದರಿ ಸ್ಥಳಕ್ಕೆ ಬೇಟಿ ನೀಡಿ ಗುಣಮಟ್ಟವನ್ನು ಪರಿಶೀಲನೆ ಮಾಡಿದ್ದರೇ, ಸಿಸಿ ರಸ್ತೆಯ ಕಾಂಕ್ರೀಟ್ ಸಂಪೂರ್ಣವಾಗಿ ಗಿಟ್ಟಿಯಾಗುವವರೆಗೆ ಸಂಚಾರವನ್ನು ನಿಯಂತ್ರಣ ಮಾಡಲು ಸೂಕ್ತ ಕ್ರಮವನ್ನು ಕೈಗೊಂಡಿದ್ದರೆ, ಸದರಿ ಸಿಸಿ ರಸ್ತೆಯ ಮೇಲ್ಪದರವು ಕಿತ್ತು ಹೋಗಿ ಪುನ: ರಿಪೇರಿ ಮಾಡುವ ಸಂದರ್ಭ ಒದಗುತ್ತಿರಲಿಲ್ಲ. ಎದುರುದಾರರೇ ಹಾಜರುಪಡಿಸಿರುವ ಛಾಯಾಚಿತ್ರಗಳನ್ನು ಪರಿಶೀಲಿಸಿದಾಗ, ಸಿಸಿ ರಸ್ತೆಯು ಕಿತ್ತು ಅಲ್ಲಲ್ಲಿ ಗುಂಡಿ ಬಿದ್ದಿರುವುದು ಹಾಗೂ ಸರಿಯಾದ ಪ್ರಮಾಣದಲ್ಲಿ ಯೋಗ್ಯವಾದ ಸಿಮೆಂಟ್ ಕಾಂಕ್ರಿಟ್‌ನ್ನು ಹಾಕಿಲ್ಲ ಎಂಬುದು ಕಂಡುಬರುವುದರಿಂದ, ಸಹಾಯಕ ಕಾರ್ಯಪಾಲಕ ಅಭಿಯಂತರರು-2 ಮತ್ತು ತನಿಖಾಧಿಕಾರಿ, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ ರವರು ತಮ್ಮ ತನಿಖಾ ವರದಿಯಲ್ಲಿ ಅಭಿಪ್ರಾಯಿಸಿದಂತೆ 1 ರಿಂದ 4ನೇ ಎದುರುದಾರರು ಕರ್ತವ್ಯ ಲೋಪ ಎಸಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

14. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ 1 ರಿಂದ 4ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **1ನೇ ಎದುರುದಾರರಾದ–ಶ್ರೀ ಟಿ.ಜೆ.ತಾಕತ ರಾವ್,** ಜಿಲ್ಲಾ ಪ್ರಾಜೆಕ್ಟ್ ಡೈರೆಕ್ಟರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಗಳೂರು, ಹಾಲಿ ನಿವೃತ್ತಿ, **(ನಿವೃತ್ತಿ ದಿನಾಂಕ: 31/07/2016), 2ನೇ ಎದುರುದಾರರಾದ–ಶ್ರೀ** ಶ್ರೀಧರ.ಜಿ, ಯೋಜನಾ ನಿರ್ದೇಶಕರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಹಾಲಿ ಕಾರ್ಯಪಾಲಕ ಅಭಿಯಂತರರು,

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು **(ನಿವೃತ್ತಿ ದಿನಾಂಕ: 31/03/2024), 3ನೇ ಎದುರುದಾರರಾದ**–ಶ್ರೀ ತೇಜಮೂರ್ತಿ, ಸಹಾಯಕ ಯೋಜನಾ ನಿರ್ದೇಶಕರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು, ಹಾಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಯವರ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು **(ನಿವೃತ್ತಿ ದಿನಾಂಕ: 31/01/2028)** ಮತ್ತು, **4ನೇ ಎದುರುದಾರರಾದ**–ಶ್ರೀ ಡೊಮಿನಿಕ್ ಡಿಮಲ್ಲೊ, ಕಿರಿಯ ಅಭಿಯಂತರರು, ಪುರಸಭೆ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ **(ನಿವೃತ್ತಿ ದಿನಾಂಕ: 31/08/2028)** ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಹಾಗೂ ಕೆ.ಸಿ.ಎಸ್.ಆರ್., 214(2)(ಬಿ)(i) ರಡಿಯಲ್ಲಿ 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

15. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12-12-19

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**